ಸದ್ಯಕ್ಕೆ ನಿಂಬೆಯು ಏಕಚಕ್ರಾಧಿಪತ್ಯ! ಅದರ ಸಮಕ್ಕೇರಲು ಟೊಮ್ಯಾಟೊ ಶಕ್ತಿಮೀರಿ ಪ್ರಯತ್ನಿಸಿ 'ಎಟುಕದ ನಿಂಬೆ ಹುಳಿ' ಎಂದುಕೊಂಡು ತೆಪ್ಪಗಾಗಿದೆ. 'ಗೊಂಬೆಯಾಟವಯ್ಯಾ' ಎನ್ನುವ ಹಾಡನ್ನು ಈಗ 'ನಿಂಬೆಯಾಟವಯ್ಯಾ' ಎಂದು ಹಾಡುವ ಸ್ಥಿತಿ.

■ ನಳಿನಿ ಟಿ. ಭೀಮಪ್ಪ





# ನಿಂಬೆಯಾಟವಯ್ಯಾ...



ಈ ನಿಂಬೆ ಬೆಲೆ ಏನ್ರೀ, ಒಳ್ಳೇ ನಮ್ ಪಿ.ಟಿ. ಉಷಾ ಓಟದ ತರಹ ಸ್ಪೀಡ್ ಆಗಿ ಏರ್ತಾನೇ ಇದೆ. ತನ್ನ ದಾಖಲೆಯನ್ನ ತಾನೇ ಮುರೀತಿದೆ. ಹೀಂಗಾದ್ರೆ ಕೊಂಡ್ಕೊಳ್ಳೋರ ಗತಿಯೇನೂ ಅಂತೀನಿ. ಈಗ ಬರೀ ಅದರ ಹುಳಿಗಷ್ಟೇ ಮುಖ ಹಿಂಡುವುದಲ್ಲ, ಅದರ ಬೆಲೆಗೂ ಮುಖ ಸಿಂಡರಿಸುವಂತಾಗಿದೆ. ಎಲ್ಲಾ ಕಡೆ ಅದರದ್ದೇ ಕಾರುಬಾರು. ಕೀಳಲು ಗಿಡದಲ್ಲಿನ ಮುಳ್ಳು ಅಡ್ಡಿ, ಕೊಳ್ಳಲು ಬೆಲೆ ಅಡ್ಡಿ.

ಮೊನ್ನೆ ಹೀಗೇ ಆಯ್ತು. ಹಾಪ್‌ಕಾಮ್ಸ್‌ಗೆ ತರಕಾರಿ ತೆಗೆದುಕೊಂಡು ಬರಲು ಹೋದಾಗ, ಅಂಗಡಿಯವನು 'ನಿಂಬೆ ತೆಗೆದುಕೊಳ್ಳಿ ಮೇಡಮ್, ತುಂಬಾ ಚೆನ್ನಾಗಿದೆ' ಎಂದು ಹೇಳಲು ಶುರು ಮಾಡಿದ. ಅದರ ಏರಿರುವ ದರ ನೋಡಿ ನಾಲ್ಕು ಅಲ್ಲದಿದ್ದರೂ ಎರಡಾದರೂ ಕೊಂಡುಕೊಳ್ಳೋಣ ಎಂದು ಹುಡುಕಾಡಿದರೆ, ಯಾವ ಕಡೆಯೂ ಅದರ ಸುಳಿವೇ ಇಲ್ಲ. 'ಏನಪ್ಪಾ ನಿಂಬೆಯೇ ಕಾಣ್ತಾ ಇಲ್ಲ' ಎಂದಾಗ, ನಗುತ್ತಾ – 'ಇಲ್ಲಿದೆ ನೋಡಿ ಮೇಡಮ್' ಎಂದು ತಾನು ಕೂತಿದ್ದ ಕುರ್ಚಿಯ ಕೆಳಗೆ ಇಟ್ಟುಕೊಂಡಿದ್ದ ಕವರ್‌ನಿಂದ ತೆಗೆದುಕೊಡುತ್ತಾ, 'ರೇಟು ತುಂಬಾ ಹೆಚ್ಚಿದೆಯಲ್ವಾ ಮೇಡಮ್, ಅದಕ್ಕೇ ಇಲ್ಲಿ ಇಟ್ಟುಕೊಂಡಿದ್ದೀನಿ, ಒಂದು ನಿಂಬೆ ಎಗರಿಸಿದರೂ ಹತ್ತು ರೂಪಾಯಿ ಲಾಸ್ ಆಗುತ್ತೆ' ಎಂದಾಗ, ನಿಂಬೆಗೂ ಈ ಮಟ್ಟಿಗೆ ವಿಐಪಿ ರಕ್ಷಣೆ ಕೊಡಬೇಕಾಗಿದೆಯಲ್ಲಾ ಎಂದು ನಗೂ ಬಂತು.

ನೋಡೋಕೆ ಆಳು ಚಿಕ್ಕದಾದರೂ, ಎಲ್ಲರನ್ನೂ ಆಳುವ ಗುಣ ಹೊಂದಿರುವುದನ್ನು ನಿಂಬೆ ಎನ್ನಬಹುದೇನೋ?

ಸದ್ಯಕ್ಕೆ ಅದರ ಬೆಲೆ ಅಳಿಸುತ್ತಿದೆ ಅಷ್ಟೇ. ಏನೋ ಕಡಿಮೆ ರೇಟು, ಜೊತೀಗೆ ಘಮ್ ಅನ್ನುತ್ತೇ, ಹಾಗೇ ಸ್ವಚ್ಛಗೊಳಿಸುವ ಗುಣಾ ಇದೆ ಅಂತಾ ಪಾತ್ರೆ ಸೋಪು, ಬಟ್ಟೆ ಸೋಪು, ಮೈಸೋಪು, ಟೂಥ್ ಪೇಸ್ಟ್‌ನಲ್ಲಿ ಸಹಿತ ನಿಂಬೆ ಇದೆ, ನಿಂಬೆ ಇದೆ

